ಎಂ ವಿ ಸಿ ನಂ. 225/2019
ಆರ್ ಡಬ್ಲ್ಯೂ: 2
ದಿನಾಂಕ 09/01/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ: 3 ನೇ ಎದುರುದಾರರ ಪರ: ಶ್ರೀ ಹೆಚ್ ಟಿ ಆರ್ ವಕೀಲರಿಂದ:

ಎ ಆರ್ ಟಿ ಒ ತರೀಕೆರೆ ಇವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಆರ್-11 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲು: 4 ನೇ ಎದುರುದಾರರ ಪರ: ಶ್ರೀ ಸಿ ಜೆ ಎಂ ವಕೀಲರಿಂದ:

ನಿಆರ್-11 ರ ಹಿಂಬರಹಕ್ಕೆ ಯಾರು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು 2018 ರಲ್ಲಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಆರ್-11 ರ ದಾಖಲೆಗೆ ದಿನಾಂಕ 06/10/2017 ಎಂದು ಹಳೆಯ ದಿನಾಂಕವನ್ನು ನಮೂದಿಸಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕಾರಿನ ಸಂಖ್ಯೆ ಕೆಎ-03 ಎಸಿ-6268 ಆಗಿರುತ್ತದೆ. ಅಪಘಾತವಾದ ದಿನ ಸದರಿ ಕಾರಿಗೆ ಆರ್ ಸಿ ಮತ್ತು ಎಫ್ ಸಿ ರಿನೀವಲ್ ಆಗಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ನನ್ನ ಕಾರಿನ ಆರ್ ಸಿ ಮತ್ತು ಎಫ್ ಸಿ ಅವಧಿ ಮುಗಿದಿತ್ತು ಎಂದರೆ ಸರಿಯಲ್ಲ. ನನ್ನ ಬಾದ್ಯತೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಆರ್-11 ರ ದಾಖಲೆಯನ್ನು ಹೊರತು ಪಡಿಸಿ ನನ್ನ ಕಾರಿಗೆ ಅಪಘಾತವಾದ ದಿನ ಎಫ್ ಸಿ ಮತ್ತು ಆರ್ ಸಿ ರಿನೀವಲ್ ಆಗಿತ್ತು ಎಂದು

ತೋರಿಸಲು ಬೇರೆ ದಾಖಲೆ ಇಲ್ಲ ಎಂದರೆ ಸಾಕ್ಷಿ ಎಫ್ ಸಿ ಮತ್ತು ಆರ್ ಸಿ ರಿನೀವಲಾಗಿತ್ತು, ಆ ಸಂಬಂದ ನಿಆರ್-11 ರ ದಾಖಲೆ ಮಾತ್ರ ಲಭ್ಯ ಇದೆ ಎಂದು ನುಡಿಯುತ್ತಾರೆ. ನಿಆರ್-5 ರ ದಾಖಲೆಯು ನನ್ನ ಕಾರಿಗೆ ಸಂಬಂದಪಟ್ಟ ಆರ್ ಸಿ ಆಗಿರುತ್ತದೆ. ಸದರಿ ದಾಖಲೆಯಲ್ಲಿ ನಮೂದಿರುವ ವಿಚಾರಗಳೆಲ್ಲವೂ ಸರಿ ಇರುತ್ತದೆ. ಸದರಿ ಆರ್ ಸಿ ಪುಸ್ತಕದಲ್ಲಿ ನನ್ನ ಕಾರಿನ ರಿಜಿಸ್ಟ್ರೇಷನ್ ಮತ್ತು ಎಫ್ ಸಿ ದಿನಾಂಕ 18/10/2017 ರವರೆಗೆ ಮಾತ್ರ ಎಂದು ನಮೂದಿರುತ್ತದೆ ಎಂದರೆ ಸಾಕ್ಷಿ ಹೌದು ಆದರೆ ನಾನು ಎಫ್ ಸಿ ರಿನೀವಲ್ ಮಾಡಿದ್ದು, ಆ ಸಂಬಂದ ನಿಆರ್-11 ರ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 18/10/2017 ರಂದು ನನ್ನ ಕಾರಿನ ಎಫ್ ಸಿ ಮತ್ತು ಆರ್ ಸಿ ಅವಧಿ ಮುಗಿದ ನಂತರ ಪುನಃ ನನ್ನ ಕಾರನ್ನು ಆರ್ ಟಿ ಓ ತಪಾಸಣೆಗೆ ಒಳಪಡಿಸಿ ಎಫ್ ಸಿ ಪಡೆದು ನಂತರ ಆರ್ ಸಿ ಮಾಡಿಸಿರುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ ಎಂದರೆ ಸಾಕ್ಷಿ ನಿಆರ್-11 ರ ದಾಖಲೆ ಮಾತ್ರ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಆರ್-11 ರ ದಾಖಲೆ ಹೊರತು ಪಡಿಸಿ ಬೇರೆ ಯಾವುದೇ ದಾಖಲೆ ಇದೆಯಾ ಎಂದು ಕೇಳಲಾಗಿ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನನ್ನ ಈ ಹಿಂದಿನ ಸಾಕ್ಷ್ಯ ವಿಚಾರಣೆಯ ಸಮಯದಲ್ಲಿ ನಿಆರ್-11 ರ ದಾಖಲೆ ನನ್ನ ಬಳಿ ಲಭ್ಯ ಇದ್ದು, ನನ್ನ ವಕೀಲರಿಗೆ ನೀಡಿದ್ದೆ ಎಂದು ನುಡಿಯುತ್ತಾರೆ. ಸದರಿ ದಾಖಲೆ ನನ್ನ ಬಳಿ ಲಭ್ಯ ಇರಲಿಲ್ಲ ಈ ಹಿಂದಿನ ಸಾಕ್ಷ್ಯ ವಿಚಾರಣೆಯಾದ ನಂತರ ನಾನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಆರ್-5 ರ ದಾಖಲೆ ಪ್ರಕಾರ ನನ್ನ ಕಾರಿನ ಎಫ್ ಸಿ ಮತ್ತು ಆರ್ ಸಿ ಅವಧಿ ಮುಗಿದಿದ್ದು ನಂತರ

ಅದನ್ನು ರಿನೀವಲ್ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಕೆ ಎ ವಕೀಲರಿಂದಃ

ಅರ್ಜಿದಾರರ ಪರ ವಕೀಲರು ಹಾಜರಿದ್ದು ತಮ್ಮ ಪರ ಮುಂದುವರೆದ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.